O.S. ನಂಬರಃ 2/2022

ಪಿ. ಡಬ್ಲ್ಯೂಃ 1

ದಿಃ 24-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದಃ

ಕಡಮೆ ಗ್ರಾಮದ ಸರ್ವೆ ನಂ. 92/2 ಕ್ಷೇತ್ರ 25-ಗುಂಟೆ 8-ಆಣೆ ನನ್ನ ತಂದೆಯ ಹೆಸರಿನಲ್ಲಿದೆ. ಪ್ರತಿವಾದಿಯರ ಆಸ್ತಿ ಎಲ್ಲಿದೆ ಎಂದು ತೋರಿಸಲು ಸರ್ವೆ ನಕ್ಷೆ ಹಾಜರುಪಡಿಸಿದ್ದೇನೆ. ನಮ್ಮ ಹಾಗೂ ಪ್ರತಿವಾದಿಯರ ಮನೆ ಇರುವ ಸ್ಥಳಗಳಿಗೆ ಗೌಡರ ಕೇರೆ ಎಂದು ಹೇಳುತ್ತಾರೆ. ಗೌಡರ ಕೇರೆಗೆ ಹೋಗುವ ರಸ್ತೆಗೆ ಹೊಂದಿ ಪ್ರತಿವಾದಿಯರ ಮನೆ ಮತ್ತು ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೋಡಿಗೆ ಹೊಂದಿಕೊಂಡು 24-ಗುಂಟೆ ಜಾಗೆ ನನ್ನದಿದೆ ಎಂದು ಹೇಳುತ್ತಾರೆ. ಸದರಿ ಸಂಗತಿ ಕುರಿತು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಮುಖ್ಯ ರಸ್ತೆಗೆ ಹೊಂದಿಕೊಂಡು ಪ್ರತಿವಾದಿಯರ ಮನೆ ಇದ್ದು, ದಕ್ಷಿಣಕ್ಕೆ ಅಂದಾಜು 2-ಅಡಿ ರಸ್ತೆ ನನ್ನ ಮನೆಗೆ ಹೋಗಲು ಇದೆ. ಸದರಿ ರಸ್ತೆಗೆ ಹಳೆ ಕಾಲದ ಗುಂಡುಗಲ್ಲುಗಳ ಪಾಗಾರವಿದೆ. ಸದರಿ ಪಾಗಾರ ಅಂದಾಜು 50 ವರ್ಷಗಳಿಂದ ಇದೆ ಎಂದರೆ ಸಾಕ್ಷಿ 10-20 ವರ್ಷಗಳಿಂದ ಇದೆ ಎಂದು ಹೇಳುತ್ತಾರೆ. ಸದರಿ ರಸ್ತೆಯಿಂದ 50 ಅಡಿ ದೂರದಲ್ಲಿ ನನ್ನ ಮನೆಯ ಕಂಪೌಂಡ ಇದೆ. ಮನೆಯ ಬಳಿ ದೇವಸ್ಥಾನ ಹಾಗೂ ದನದ ಕೊಟ್ಟಿಗೆ, ಮನೆಯ ಪೂರ್ವಭಾಗಕ್ಕೆ ಕುಡಿಯುವ ನೀರಿನ ಬಾವಿ ಹಾಗೂ ಪಂಪ್ ಸೆಟ್ ಇದ್ದು, ಅದರ ಸುತ್ತಲೂ ಚೀರೇ ಕಲ್ಲಿನ ಪಾಗಾರ ಇದೆ. ಸದರಿ ಮುಖ್ಯ ರಸ್ತೆಯಿಂದ ಬರುವ ಓಣಿ ರಸ್ತೆ ನಮ್ಮ ಮನೆಯವರೆಗೂ ಇದ್ದು, ನನ್ನ ಮನೆಯ ಮುಂದೆ ಎಡಕ್ಕೆ ತಿರುವು ಇದೆ. ಸದರಿ ಎಡಕ್ಕೆ ತಿರುವು ಇರುವಲ್ಲಿ ಮೋಟರ್ ಸೈಕಲ್ ಹೋಗುವಷ್ಟು ಗೇಟ್ ನಿರ್ಮಿಸಿಕೊಂಡಿದ್ದೇನೆ ಎಂದರೆ ಸರಿ, ಮುಂದುವರೆದು ಅದನ್ನು 2 ನೇ ಪ್ರತಿವಾದಿ

ಮುರಿದುಹಾಕಿದ್ದಾನೆ ಎಂದು ಹೇಳುತ್ತಾರೆ. ಸದರಿ ಗೇಟಿನಿಂದ ಮೋಟರ್ ಸೈಕಲ್ ದೂಡಿಕೊಂಡು ಒಳಗೆ-ಹೊರಗೆ ತೆಗೆದುಕೊಂಡು ಹೋಗುತ್ತೇನೆ. ನನ್ನ ಮನೆಯಿಂದ ಮುಖ್ಯ ರಸ್ತೆಗೆ ನಾನು ಮೋಟರ್ ಸೈಕಲ್ ನಡೆಸಿಕೊಂಡು ಹೋಗುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ರಸ್ತೆಯಿಂದ ನನ್ನ ಮನೆಗೆ ಮೋಟರ್ ಸೈಕಲನ್ನು ನಾನು ತಳ್ಳಿಕೊಂಡು ಹೋಗುತ್ತೇನೆ.

ಈಗ ನಾನು ನೋಡುತ್ತಿರುವ ಭಾವಚಿತ್ರಗಳಲ್ಲಿ ಕಾಣಿಸುತ್ತಿರುವ ಭಾಗ ನನ್ನ ಮನೆಗೆ ಹೋಗಿ-ಬರುವ ಓಣಿ ರಸ್ತೆ ಎಂದರೆ ಸರಿ. ಸಾಕ್ಷಿ ಸದರಿ ಭಾವಚಿತ್ರಗಳಲ್ಲಿಯ ರಸ್ತೆ ಭಾಗ ನೋಡಿ ಗುರುತಿಸಿದ್ದು, ಅವುಗಳನ್ನು ನ್ಯಾಯಾಲಯದ ಗುರುತಿಗಾಗಿ ನಿಡಿ-1 ಮತ್ತು 2, ರಸ್ತೆಯ ಭಾಗವನ್ನು ನಿಡಿ-1ಎ ಮತ್ತು ನಿಡಿ-2ಎ ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರಸ್ತೆಯನ್ನು ಬೇರೆ ಬೇರೆ ಜನರು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಮತ್ತು ಪ್ರತಿವಾದಿಯರು ಮಾತ್ರ ಉಪಯೋಗಿಸುತ್ತಾರೆ ಹಾಗೂ ಆ ಜಮೀನೆಲ್ಲ ನನ್ನದು ಎಂದು ಹೇಳುತ್ತಾರೆ. ನನ್ನ ಕೊಟ್ಟಿಗೆಯ ಹಾಗೂ ಪ್ರತಿವಾದಿಯರ ಕೊಟ್ಟಿಗೆಯ ದನಗಳು ನಿಡಿ-1 ಮತ್ತು 2 ರ ರಸ್ತೆಯ ಮುಖಾಂತರ ಓಡಾಡುತ್ತವೆ ಎಂದರೆ ಸರಿ. ಸದರಿ ಓಣಿಯ ಕೊನೆಗೆ ಒಂದು ಬದಿಯಲ್ಲಿ ನನ್ನ ದನದ ಕೊಟ್ಟಿಗೆ ಇದೆ. ಅದರ ಇನ್ನೊಂದು ಬದಿಯಲ್ಲಿ ಪ್ರತಿವಾದಿಯರ ದನದ ಕೊಟ್ಟಿಗೆ ಇದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.